ದಿನಾಂಕ 08-01-2026 ರಂದು ಸಾಕ್ಷಿಯನ್ನು ಕರೆಯಿಸಿ ಸತ್ಯ ಪ್ರತಿಜ್ಞೆ ಬೋಧಿಸಲಾಯಿತು.

**ಮುಂದುವರೆದ ಪಾಟೀ ಸವಾಲುಃ 1 ನೇ ಪ್ರತಿವಾದಿ ಪರ ವಕೀಲರಿಂದಃ**

1 ನೇ ಪ್ರತಿವಾದಿಗೆ ನಿಪಿ 8 ರಂತೆ ನೋಟೀಸನ್ನು ಯಾವ ದಿನಾಂಕದಂದು ನೀಡಿರುತ್ತೇನೆ ಎಂದು ನೆನಪಿಲ್ಲ. ಆ ಕುರಿತು ದಾಖಲೆಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ. ಸದರಿ ನೋಟೀಸನ್ನು ನಿಪಿ 8 ರಂತೆ ದಿನಾಂಕ 04-06-2020 ರಂದು ನೀಡಿರುತ್ತೇನೆ ಎಂದರೆ ಸರಿ. ನಿಪಿ 3 ರ ಕ್ರಯಪತ್ರದ ದಿನಾಂಕ 18-01-1998 ಆಗಿರುತ್ತದೆ ಎಂದರೆ ಸರಿ. ಸದರಿ ಖರೀದಿ ಪತ್ರದ ಕುರಿತು ಹಣ ಜಮಾ ಆಗಿರುವ ಬಗ್ಗೆ ಹಾಗೂ ಲೆಕ್ಕಪರಿಶೋಧನೆ ಆಗಿರುವ ಬಗ್ಗೆ ತಿಳಿದಿರುತ್ತದೆ ಎಂದರೆ ಸರಿ. ನಿಪಿ 3 ರ ಖರೀದಿ ಪತ್ರವನ್ನು ನಾನು ಈ ಪ್ರಕರಣದ ಪೂರ್ವದಲ್ಲಿ ನೋಡಿರಲಿಲ್ಲ.

2. ಸಾಕ್ಷಿಗೆ ದಿನಾಂಕ 27-12-1998 ರ ಖರೀದಿ ಪತ್ರದ ಮೂಲ ದಾಖಲೆಯನ್ನು ತೋರಿಸಿ ನಿಪಿ 3 ರ ಮೂಲ ದಾಖಲೆಯಾಗಿರುತ್ತದೆ ಎಂಬ ಪ್ರಶ್ನೆಗೆ ಸಾಕ್ಷಿಯು ಸದರಿ ಖರೀದಿಪತ್ರವನ್ನು ನೋಡಿ ಗುರುತಿಸಿದ್ದು, ಸದರಿ ದಾಖಲೆಯನ್ನು **ನಿಡಿ 1** ಎಂದು ಗುರುತಿಸಲಾಯಿತು. 3 ನೇ ಪ್ರತಿವಾದಿಯು 2 ನೇ ಪ್ರತಿವಾದಿಯ ಸಹಿಯನ್ನು ಪಡೆದು ದುರುಪಯೋಗಪಡಿಸಿಕೊಂಡು ನಿಡಿ 1 ರಂತೆ ಖರೀದಿ ಪತ್ರ ಮಾಡಿಕೊಂಡಿರುವುದಾಗಿ ಈ ದಾವೆ ಹೂಡಿರುತ್ತೇವೆ ಎಂದರೆ ಸರಿ. ನಿಡಿ 1 ರ ದಾಖಲೆಗೆ ದಸ್ತೂರು ಎಂದು 2 ನೇ ಪ್ರತಿವಾದಿ ಸಹಿ ಮಾಡಿರುತ್ತಾರೆ ಎಂದರೆ ಸರಿ. ನಿಡಿ 1 ರಲ್ಲಿ 3 ನೇ ಪ್ರತಿವಾದಿ ಖರೀದಿ ಪತ್ರ ಬರೆದುಕೊಟ್ಟಿರುವ ಬಗ್ಗೆ ಉಲ್ಲೇಖ ಇರುವುದಿಲ್ಲ ಎಂದರೆ ಸರಿ. ಸೊಸೈಟಿಯ ದಾಖಲೆಗಳನ್ನು ಕಾಪಾಡಿಕೊಳ್ಳುವುದು ಮತ್ತು ಸದಸ್ಯರಿಂದ ವಂತಿಗೆ ಹಣ ಪಡೆದು ವ್ಯವಹಾರಗಳನ್ನು ನೋಡಿಕೊಳ್ಳುವ ಕರ್ತವ್ಯ ಕಾರ್ಯದರ್ಶಿಯವರದ್ದಾಗಿರುತ್ತದೆ ಎಂದರೆ ಸರಿ.

3. ಕಾರ್ಯದರ್ಶಿ ಸೊಸೈಟಿಯ ದಾಖಲೆಗಳನ್ನು ನೀಡಿದರೆ ಮಾತ್ರ ಸದಸ್ಯರ ಬಳಿ ದಾಖಲೆಗಳು ಸೇರುತ್ತವೆ ಎಂದರೆ ಸರಿ. 1 ನೇ ಪ್ರತಿವಾದಿಗೆ ಸದಸ್ಯತ್ವದ ಕುರಿತು ಕೇವಲ ಪಾಸ್ ಪುಸ್ತಕವನ್ನು ಮಾತ್ರ ನೀಡಿರುತ್ತೇವೆ ಎಂದರೆ ಸರಿಯಲ್ಲ. ವಾದಿ ಸೊಸೈಟಿಯು ಮಾಡಿಕೊಟ್ಟ ಎಲ್ಲಾ ಖರೀದಿ ಪತ್ರದ ಹಣ ಬ್ಯಾಂಕ್ ಮೂಲಕ ವರ್ಗಾವಣೆಯಾಗಿರುತ್ತದೆ ಎಂದರೆ ಸರಿ. ದಾವಾ ಆಸ್ತಿಯ ಕುರಿತು ಖರೀದಿ ಪತ್ರದ ಹಣ ರೂ.2,470/- ಬ್ಯಾಂಕ್ ಚಲನ್ ಮೂಲಕ ವಾದಿ ಸೊಸೈಟಿಗೆ

ವರ್ಗಾವಣೆಯಾಗಿರುತ್ತದೆ ಎಂದರೆ ಸರಿಯಲ್ಲ. ಆ ಕುರಿತು ಖರೀದಿ ಪತ್ರದಲ್ಲಿ ಉಲ್ಲೇಖ ಇರುತ್ತದೆ

ಎಂದರೆ ಸಾಕ್ಷಿಯು ಅವರುಗಳು ಬರೆದುಕೊಂಡಿರುವುದಾಗಿ ನುಡಿಯುತ್ತಾರೆ.

4. ಖರೀದಿ ಪತ್ರದಂತೆ ಹಣ ಜಮಾ ಆಗದ ಕುರಿತು ಸದರಿ ದಿನಾಂಕದ ರಿಜಿಸ್ಟರ್ ನ್ನು ಈ ದಾವೆಯಲ್ಲಿ ಹಾಜರುಪಡಿಸಿರುವುದಿಲ್ಲ. ನಿಡಿ 1 ರಲ್ಲಿ ತೋರಿಸಿರುವ ಖರೀದಿ ಮೊತ್ತ ಆ ವರ್ಷದ ಮಾರುಕಟ್ಟೆ ಮೌಲ್ಯ ಆಗಿರುತ್ತದೆ ಎಂದರೆ ಸರಿ. ಈ ದಾವೆ ಹೂಡುವ ಸಮಯದಲ್ಲಿ ದಾವಾ ಆಸ್ತಿಯ ಮೌಲ್ಯ ಅಂದಾಜು ರೂ.60,000/- ಇತ್ತು ಎಂದರೆ ಸರಿ. ಆ ಕಾರಣ ನಾವು ಈ ಸುಳ್ಳು ದಾವೆ ಹೂಡಿರುತ್ತೇವೆ ಎಂದರೆ ಸರಿಯಲ್ಲ. ಯಾವುದೇ ವ್ಯಾಜ್ಯ ಕಾರಣ ಇಲ್ಲದೇ ಇದ್ದರೂ ಸಹ ಸುಳ್ಳು ಮಾಹಿತಿ ನೀಡಿ ಈ ದಾವೆ ಹೂಡಿರುತ್ತೇವೆ ಎಂದರೆ ಸರಿಯಲ್ಲ. ನಾನು ಮತ್ತು 2 ನೇ ಪ್ರತಿವಾದಿ ಮಿಲಾಪಿಯಾಗಿ 1 ನೇ ಪ್ರತಿವಾದಿಗೆ ತೊಂದರೆ ಕೊಡುವ ಕಾರಣ ಸುಳ್ಳು ದಾವೆ ಹೂಡಿರುತ್ತೇವೆ ಎಂದರೆ ಸರಿಯಲ್ಲ. 3 ನೇ ಪ್ರತಿವಾದಿ ನಮ್ಮ ಸೊಸೈಟಿಗೆ ಯಾವುದೇ ರೀತಿ ಸಂಬಂದ ಇಲ್ಲ ಎಂದರೆ ಸರಿಯಲ್ಲ.

**2 ನೇ ಪ್ರತಿವಾದಿ ಪರ ವಕೀಲರು ಗೈರು ಹಾಜರಾಗಿದ್ದು, 2 ನೇ ಪ್ರತಿವಾದಿ ಪರ ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.**

ಮರು ವಿಚಾರಣೆ ಇಲ್ಲ.

ತೆ.ನ್ಯಾದಲ್ಲಿ ಬೆ.ಮಾಡಲಾಯಿತು. ನನ್ನ ಸಮಕ್ಷಮ

ಸಹಿ

ಓ ಹೇ ಕೆ ಸರಿ ಇದೆ. ಪ್ರಧಾನ ದಿವಾಣಿ ನ್ಯಾಯಾಧೀಶರು,
ರಾಣೇಬೆನ್ನೂರು.